ಶ್ರೀ ಐ. ನಾರಾಯಣಗೌಡ.—ಶರಾವತಿ ವ್ಯಾಲಿ ಮೊದಲನೆಯ ಹಂತವನ್ನು ಪೂರೈಸಲು ಎಷ್ಟುವರ್ಷ ಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯದಲ್ಲಿ ಈಗಾಗಲೇ ಈ ಸಭೆಯಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಅವರು ಮರೆತುಹೋಗಿದ್ದಾರೆ; ಪುನಃ ತಿಳಿದು ಕೊಳ್ಳಬಹುದು.

ಶ್ರೀ ಐ. ನಾರಾಯಣಗೌಡ.—ಶರಾವತಿ ಯೋಜನೆಯ ಮೊದಲನೆಯ ಹಂತ ಪೂರೈಸುವವರೆಗೂ ಈಗಿನ ಪದ್ಧತಿಯಂತೆಯೇ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆ ಎಂದು ಹೇಳಿದ್ದೀರಿ. ಮೊದಲನೆ ಹಂತ ಎಷ್ಟು ಕಾಲದೊಳಗೆ ಪೂರೈಸಬೇಕೆಂದು ಇದೆ ?

ಶ್ರೀ ಎಚ್. ಎಂ ಚನ್ನಬಸಪ್ಪ.—ಮೊದಲನೆ ಹಂತ ಡಿಸೆಂಬರ್ 31, 1962 ರಲ್ಲಿ ಪೂರೈಸಿ, ಮೊದಲನೆ ಯೂನಿಟ್ ಸ್ಥಾಪನೆ ಮಾಡುತ್ತೇವೆ ಎಂದು ಇಲ್ಲಿ ಹೇಳಿರುವುದಲ್ಲದೆ, ಅನೇಕ ಸಲ ಅನೇಕ ಪ್ಲಾಟ್ ಫಾರಂಗಳ ಮೇಲೂ ಹೇಳಿದ್ದೇನೆ.

**Sri C. J. MUCKANNAPPA.**—May I know the action the Minister for Public Works has taken to relieve these people from their hardships ?

**Sri H. M. CHANNABASAPPA.**—There are certain hardships which can be relieved and there are certain hardships which cannot be relieved. This is a hardship which we can relieve when we receive switches from abroad and we are expecting them in the early part of 1960.

ಶ್ರೀ ಕೆ. ಎಲ್. ನರಸಿಂಹಯ್ಯ.—ಟ್ರೈಂ ಸ್ವಿಚ್ ಎರೆಕ್ಟಿಸಿಟಿ ಬೋರ್ಡಿನವರೇ ನಮ್ಮ ಮಾಡುತ್ತಾರೆ ಎಂದು ಅಷ್ಯೂರೆನ್ಸ್ ಕೊಟ್ಟಿರಲಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರೆಕ್ಟಿಸಿಟಿ ಬೋರ್ಡಿನವರು ಟ್ರೈಂ ಸ್ವಿಚ್‌ಗೆ ಆರ್ಡರ್ಸ್ ಪ್ಲೇಸ್ ಮಾಡಿದ್ದಾರೆ. ಫಾರಿನ್ ಎಕ್ಸ್‌ಚೇಂಜು ಹೊಂದಿದ್ದಾರೆ. ಅದು ಇಂಡಿಯಾಕ್ಕೆ 1960 ನೆಯ ಇಸವಿಯ ಪ್ರಥಮ ಭಾಗದಲ್ಲಿ ಬರತಕ್ಕ ನಿರೀಕ್ಷಣೆ ಇದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—40 ರೂಪಾಯಿಗೆ ಮಾರತಕ್ಕ ಟ್ರೈಂ ಸ್ವಿಚ್ ಸರ್ಕಾರದವರಲ್ಲಿ ಇಲ್ಲ ಎಂದು 300 ರೂಪಾಯಿವರೆಗೂ ತೆಗೆದುಕೊಳ್ಳುತ್ತಾಯಿರುವುದರಿಂದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಿಕ್ಕುವುದಿಲ್ಲ, ಸಿಕ್ಕುವುದು ಕಷ್ಟ ಎಂದು ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ಐ. ನಾರಾಯಣಗೌಡ.—ಟ್ರೈಂ ಸ್ವಿಚ್ ಬರುವವರೆಗೂ ಹೊಸದಾಗಿ ಪಂಪ್‌ಸೆಟ್ ಮಂಜೂರು ಮಾಡುವುದಿಲ್ಲ ಎಂಬುದು ಸರ್ಕಾರದವರ ಅಭಿಪ್ರಾಯವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇರಿಗೇಷನ್ ಪಂಪ್‌ಸೆಟ್ಸ್ ಮಂಜೂರು ಮಾಡುತ್ತೇವೆ. ಲೈನ್‌ಮನ್ ಹೋಗಿ ಕಂಟ್ರೋಲ್ ತೆಗೆದುಕೊಳ್ಳಬಹುದಾದ ದೂರಮೊಳಗೆ ಇದ್ದರೆ ಸುಲಭವಾಗಿ ಮಂಜೂರು ಮಾಡುತ್ತೇವೆ. ಲೈನ್‌ಮನ್ ಹೋಗಿ ಕಂಟ್ರೋಲ್ ಮಾಡುವುದಕ್ಕೆ ಬಹಳ ದೂರವಾದರೆ ಕಷ್ಟವಾಗುತ್ತದೆ. ಎಲ್ಲಾ ಐ.ಪಿ. ಸೆಟ್ಸ್ ಒಂದೇ ಲೈನ್‌ನಲ್ಲಿ ಇದ್ದು ಇನ್ನಾವ ಬೇರೆ ವಿಧವಾದ ಕರ್ಷಣ ಕರ್ಷಣನ್ನು ಇಲ್ಲದೆ ಲಿಫ್ಟ್ ಇರಿಗೇಷನ್ನಿಗೇ ಉಪಯೋಗವಾಗುವುದಾದರೆ ಎಷ್ಟೇ ಮೈಲು ದೂರದಲ್ಲಿದ್ದರೂ ಮಂಜೂರು ಮಾಡುತ್ತೇವೆ, ತೊಂದರೆ ಇಲ್ಲ. ಮತ್ತೊಂದು ವಿಷಯ ಪರ್ಯಾಲೋಚನೆ ಮಾಡುತ್ತಾ ಇದ್ದೇವೆ. ರಾತ್ರಿಹೊತ್ತು ಪಂಪ್ ಹಾಕತಕ್ಕ ಜನ ಹೆಚ್ಚಾಗಿದ್ದರೆ ಆ ಕ್ಷೇತ್ರದಲ್ಲಿ ಸಾಧ್ಯವಾದರೆ ಹಗಲು ತೆಗೆದುಕೊಳ್ಳತಕ್ಕವರಿಗೆ ಪವರ್ ನಷ್ಟವಾಗಿ ಮಾಡುವುದನ್ನು ಸ್ವಾಮಿಗರ್ ಮಾಡಿ ಎರೆಲ್ಲಿಲ್ಲ ಕೊಡುವುದಕ್ಕೆ ಸಾಧ್ಯ ಎಂಬ ವಿಷಯವನ್ನು ಪರ್ಯಾಲೋಚನೆ ಮಾಡುತ್ತಾ ಇದ್ದೇವೆ. ಅದರ ಬಗ್ಗೆ ಸರ್ಕಾರದ ಲೈಸೆನ್ಸ್ ತೆಗೆದುಕೊಂಡು ಮಾಡುವುದು ಸಾಧ್ಯವೇ ಅಥವಾ ಶಾಸನ ಮಾಡಿ ಮಾಡಬೇಕೇ ಎನ್ನುವ ವಿಷಯವನ್ನು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಾ ಇದ್ದಾರೆ. ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ಬೇಗ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಈಗತಾನೆ ಮಾನ್ಯ ಮಂತ್ರಿಗಳು ಟ್ರೈಂ-ಸ್ವಿಚ್‌ಗಳು 1960 ರಲ್ಲಿ ಬರುತ್ತವೆ ದು ಅಪ್ಪಣೆ ಕೊಡಿಸಿರುವುದರಿಂದ, ಅಲ್ಲಿಯವರೆಗಾದರೂ ರೈತರಿಗೆ ಈ ಬಗ್ಗೆ ಅನುಕೂಲ ಕಲ್ಪಿಸಿಕೊಡಲಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಅನುಕೂಲ ಕೊಟ್ಟಿದ್ದೇ ಆದರೆ ಟ್ರೈಂ-ಸ್ವಿಚ್‌ಗಳು ಇಲ್ಲದಿರುವುದರಿಂದ ವಿದ್ಯುಚ್ಛಕ್ತಿಯನ್ನು ಆ ಜನರು ತಮ್ಮ ಇಚ್ಛಾನುಸಾರ ಉಪಯೋಗಿಸಿ ಪವರ್ ವೇಸ್ಟಾಗುತ್ತದೆಂಬ ಅಂತ ಮಾನ ಸದಸ್ಯರಿಗೂ ಗೊತ್ತಿದೆ. ಆದುದರಿಂದ ಸರ್ಕಾರದವರು ಪ್ರತಿಬಂಧಕ ನೇಮಕಗಳನ್ನಿಟ್ಟಿರುವುದು ಸರಿಯಾದುದೆಂಬುದನು ಮಾನ್ಯ ಸದಸ್ಯರೂ ಕೂಡ ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ.

---

## Taking over of Tavarekere-Bevinahalli Road by the Public Works Department.

*Q.—106. **Sri T. TARE GOWDA** (Sira).—

Will the Government be pleased to state :—

(*a*) whether they have not received representations from the public that "Tavarekere-Bevinahalli" road of 11 miles belonging to Tumkur District Board, connecting Sira-Changavara P.W.D. road with Sira-Hiriyur-Chitradurga High Road be taken over for maintenance by the P.W.D.;

(*b*) if so, the action taken by the Government so far ;

(*c*) whether they will take early action in the matter ?

*A*.—**Sri T. SUBRAMANYA** (Minister for Law, Labour and Local Self-Government).—

(*a*) No.

(*b*) Does not arise in view of reply to clause (*a*).

(*c*) This will be examined if and when the question of taking over some more District Board roads by the Public Works Department is considered.

ಶ್ರೀ ಟಿ. ತಾರೇಗೌಡ.—(ಎ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಲಾಗಿದೆ. ಹಾಗಾದರೆ ಈ ಹಿಂದೆ ಪಿ.ಡಬ್ಲ್ಯು.ಡಿ. ಶಾಖಾ ಸಚಿವರಾಗಿರತಕ್ಕ ಶ್ರೀ ಎಚ್. ಎಂ. ಚನ್ನಬಸಪ್ಪನವರೂ, ಅವರಿಗೆ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಎಚ್. ಕೆ. ವೀರಣ್ಣಗೌಡರೂ ಮತ್ತು ಶ್ರೀ ಆರ್. ಚೆನ್ನಿಗರಾಮಯ್ಯನವರೂ ಈ ರಸ್ತೆಯನ್ನು P.W.D. ಗೆ ತೆಗೆದುಕೊಳ್ಳಲಾಗುತ್ತದೆಂದು ಹೇಳಿದ್ದ ವಿಚಾರವೇನಾಯಿತು ?

†ಶ್ರೀ ಟಿ. ಸುಬ್ರಹ್ಮಣ್ಯ.—ಸ್ವಾಮಿ, ನಾನೀಗ ನಮಗೆ ಸಂಬಂಧಪಟ್ಟ ಜಿಲ್ಲಾ ಬೋರ್ಡಿನಿಂದ ಬಂದಿರತಕ್ಕ ಸಮಾಚಾರದ ಪ್ರಕಾರ ಉತ್ತರವನ್ನು ಓದಿಸಿದ್ದೇನೆ. ಆದರೆ ಈ ವಿಚಾರದಲ್ಲಿ ಅವರು ಹಾಗೆ ಮಾತನಾಡಿದ್ದರೆ ಅದನ್ನು ಮುಂದೆ ವಿಚಾರ ಮಾಡಿ ಉತ್ತರ ಹೇಳುತ್ತೇನೆ.

**Sri H. M. CHANNABASAPPA.**—In answer to his question, we are considering the question of upgrading some of the District Board roads which are of importance, in view of the fact that the District Board is going to be abolished and all the responsibility will have to be taken over by the Local board. It is not only to Sri Tare Gowda but to all Hon'ble Members I appeal to send all their suggestions to the Government and Government will examine and take over such of the District Board roads which are deserving.

ಶ್ರೀ ಕೆ. ಎರ್. ನರಸಿಂಹಯ್ಯ.—ಕಳೆದ ಸಾಲಿನಲ್ಲಿ P.W.D. ಗೆ ಸೇರಿರತಕ್ಕ ರಸ್ತೆಗಳ ರಿಪೇರಿಯೇ ಸರಿಯಾಗಿ ನಡೆದಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಇಲಾಖೆಗೆ ಅಷ್ಟು ಹೆಚ್ಚಿನ ಕೆಲಸ ಕಾರ್ಯಗಳಿರುತ್ತವೆಂಬ ಅಂಶವನ್ನು ಮಾನ್ಯ ಸದಸ್ಯರೂ ಕೂಡ ಒಪ್ಪಿಕೊಳ್ಳುತ್ತರೆಂದು ನಂಬಿದ್ದೇನೆ.

**Sri G. VENKATAI GOWDA.**—May I know when you are going to take in these matters ?

**Sri H. M. CHANNABASAPPA.**—I cannot straightaway say. Government is examining and wherever there is need, Government will take a decision at the appropriate time.

ಶ್ರೀ ಟಿ. ತಾರೇಗೌಡ.—ಸ್ಟೇಟ್-ಫಂಡ್ ರಸ್ತೆಯನ್ನೂ ಮತ್ತು ಹೈವೇಸ್‌ಗಳನ್ನು ಕೂಡಿಸುವಂಥ ಜಿಲ್ಲಾ ಬೋರ್ಡ್ ರಸ್ತೆಗಳನ್ನು ಮಾತ್ರ P.W.D. ಗೆ ತೆಗೆದುಕೊಳ್ಳಲಾಗುತ್ತೆಂದು ಹೇಳಿದ್ದು ನಿಜವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಪ್ರಶ್ನೆ ಸರ್ಕಾರದವರ ಪರಿಶೀಲನೆಯಲ್ಲಿದೆ. ಯಾವ ಯಾವ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಆ ಪರಿಶೀಲನೆ ಮುಗಿದನಂತರ ತೀರ್ಮಾನಿಸಲಾಗುತ್ತದೆ.

ಶ್ರೀ ಟಿ. ತಾರೇಗೌಡ.—ಈಗಾಗಲೇ ಇಲ್ಲಿ ಹೇಳಿರತಕ್ಕ ರಸ್ತೆಯಲ್ಲಿ ಬಸ್ ಸಂಚಾರವಿದ್ದು ಸರ್ಕಾರಕ್ಕೆ ಟ್ಯಾಕ್ಸ್ ಕೊಡುತ್ತಿರುವ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಸ್‌ಗಳು ಸಂಚಾರ ಮಾಡುವ ರಸ್ತೆಗೆ ಟ್ಯಾಕ್ಸ್ ಕೊಟ್ಟೇ ಕೊಡಬೇಕೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದುದರಿಂದ ಮುಂದೆ ಯಾವ ರೀತಿ ಸರ್ಕಾರ ತೀರ್ಮಾನವನ್ನು ಕೈಗೊಳ್ಳುವುದೋ ಅದಕ್ಕನುಗುಣವಾಗಿ ಈ ರಸ್ತೆಗಳ ಕಾರ್ಯವನ್ನು ತೆಗೆದುಕೊಳ್ಳಲಾಗುತ್ತದೆ.

**Mr. SPEAKER.**—Question time is over.

---

## Member's Representation.

ಶ್ರೀ ಕುಂದೂರು ರುದ್ರಪ್ಪ (ಚೆನ್ನಗಿರಿ).—ಅಧ್ಯಕ್ಷರೇ, ನಾನೊಂದು ಸಾರ್ವಜನಿಕ ಸಮಾಚಾರವನ್ನು ಈಗ ಈ ಸಭೆಯ ಗಮನಕ್ಕೆ ತರಬೇಕಾಗಿದೆ...

ಅಧ್ಯಕ್ಷರು.—ತಾವು ತಮ್ಮ ಸೂಚನೆಯನ್ನು ಸಭೆಯ ಮುಂದೆ ತರುವ ಮುನ್ನ ನನ್ನ ಅನುಮತಿಯನ್ನು ಪಡೆಯಬೇಕಾಗಿತ್ತು. ಹಾಗೆ ತಾವು ಮಾಡಿರುವುದಿಲ್ಲ. ಈಗತಾನೆ ತಾವು ತಮ್ಮ ಸೂಚನೆಯನ್ನು ನನಗೆ ಕಳುಹಿಸಿದ್ದೀರಿ. ಈ ಬಗ್ಗೆ ಆಲೋಚನೆ ಮಾಡಿ ತಮಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಾಳೆಯ ದಿವಸ ಅವಕಾಶ ಕೊಡಲಾಗುವುದು.

---

## Delay in placing on the Table the Rules and Notifications issued by Government.

†**Sri J. B. MALLARADHYA** (Nanjangud).—Sir, I wish to bring to the notice of the Hon'ble Speaker and to this House through you that on Saturday the Hon'ble the Chief Minister was pleased to lay on the Table of the House a set of rules in connection with the Suppression of Immoral Traffic in